(ಇಂದು ದಿನಾಂಕಃ 12-02-2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು) (In camera proceedings)

**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಬಿ.ಎಸ ಎದುರುದಾರರ ಪರ ವಕೀಲರಿಂದಃ</u>**

1. ನಾನು ಶ್ರೇಯಾರವರನ್ನು ಕೊನೆಯಬಾರಿ 2017 ರಲ್ಲಿ ನೋಡಿರುತ್ತೇನೆ. ನಾನು ಶ್ರೇಯಾರವರನ್ನು ಕೊನೆಯಬಾರಿ 2017 ರಲ್ಲಿ ನೋಡಿರುತ್ತೇನೆ ಅಂತಾ ಹೇಳುತ್ತಿದ್ದು ಅವರ ಫೋಟೊಗಳನ್ನು 2023 ರವರೆಗೆ ನನ್ನ ಮೊಬೈನಲ್ಲಿ ಇಟ್ಟುಕೊಂಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಮೊಬೈನಲ್ಲಿ ಇರಲಿಲ್ಲ ಜಿ ಮೇಲ್ ಐಡಿಯಲ್ಲಿ ಇತ್ತು ಎಂದು ಹೇಳುತ್ತಾರೆ. ಒಂದು ಇ ಮೇಲ್ ಐಡಿಗೆ ಸೆಕ್ಯುರಿಟಿ ಕೊಡ ಇರುತ್ತದೆ ಅದನ್ನು ಹಾಕುವವರೆಗೆ ಅದು ಓಪನ ಆಗುವುದಿಲ್ಲ ಎಂದರೆ ಸರಿ. ಜಿ ಮೇಲ್ ಐಡಿಯಲ್ಲಿ ಅಥವಾ ಮೊಬೈನಲ್ಲಿ ಬೇರೆ ಹೆಣ್ಣು ಮಗಳ ಫೋಟೊ ಇಟ್ಟುಕೊಳ್ಳುವುದು ತಪ್ಪು ಎಂದರೆ ಸಾಕ್ಷಿ ಅವರು ನನ್ನ ವಿದ್ಯಾರ್ಥಿನಿ ಇದ್ದರು ಎಂದು ಹೇಳುತ್ತಾರೆ. ಒಂದು ವ್ಯಕ್ತಿಯ ಜೊತೆ ಅವರ ಹೆಂಡತಿ ನಿಂತುಕೊಂಡು ಫೋಟೊ ತೆಗೆದುಕೊಳ್ಳುವುದಕ್ಕು ಮತ್ತು ಒಬ್ಬ ವಿದ್ಯಾರ್ಥಿನಿ ನಿಂತುಕೊಂಡು ಫೋಟೊ ತೆಗೆದುಕೊಳ್ಳುವುದಕ್ಕು ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಾನು ಶ್ರೇಯಾರವರ ಜೊತೆ ತೆಗೆದುಕೊಂಡಿರುವ ಫೋಟೊ ಒಬ್ಬ ವಿದ್ಯಾರ್ಥಿನಿಯ ಜೊತೆ ನಿಂತುಕೊಂಡು ತೆಗೆದುಕೊಂಡಿರುವ ಫೋಟೊ ಅಲ್ಲ ಎಂದರೆ ಸಾಕ್ಷಿ ಅದು ಆ ರೀತಿ ಇರಲಿಲ್ಲ ಎಂದು ಹೇಳುತ್ತಾರೆ. ಶ್ರೇಯಾರವರ ಮದುವೆ ಆಗಿ ಅವಳ ಗಂಡ ಕೂಡ ಇದ್ದಾನೆ ಎಂದರೆ ಸಾಕ್ಷಿ ಅವಳ ಮದುವೆ ಆಗಿಲ್ಲ ಎಂದು ಹೇಳುತ್ತಾರೆ. 2017 ರಲ್ಲಿ ಶ್ರೇಯಾರವರ ಮೊಬೈಲ ಸಂಖ್ಯೆ ಏನು ಇತ್ತು ಎಂದು ನನಗೆ ಮಾಹಿತಿ ಇಲ್ಲ. 2017 ರಲ್ಲಿ ಶ್ರೇಯಾರವರ ಮೊಬೈಲ ಸಂಖ್ಯೆ

7353988996 ಇತ್ತು ಎಂದರೆ ನನಗೆ ಗೊತ್ತಿಲ್ಲ. ಶ್ರೇಯಾರವರ ಜೊತೆ ನನಗೆ ಸಂಬಂಧ ಇದೆ ಎಂದು ನನ್ನ ತಾಯಿ ನನ್ನ ಹೆಂಡತಿ ಮತ್ತು ನನ್ನ ಸ್ನೇಹಿತ ತುಕಾರಾಮ ಎಂಬುವವರು ನನ್ನನ್ನು ಹಿಡಿದಿದ್ದರು ಎಂದರೆ ಸರಿಯಲ್ಲ. ಶ್ರೇಯಾರವರ ಜೊತೆ ನನಗೆ ಸಂಬಂಧ ಇದೆ ಎಂದು ನನ್ನ ತಾಯಿ ನನ್ನ ಹೆಂಡತಿ ಮತ್ತು ನನ್ನ ಸ್ನೇಹಿತ ತುಕಾರಾಮರವರಿಗೆ ಗೊತ್ತಾದ ನಂತರ ನನ್ನಹಾಗೂ ಎದುರುದಾರರ ನಡುವೆ ಭಿನ್ನಾಭಿಪ್ರಾಯ ಉಂಟಾಗಿದೆ ಎಂದರೆ ಸರಿಯಲ್ಲ. ನನ್ನ ತಾಯಿ ನೀನೆ ಅವನಿಗೆ ಬುದ್ಧಿವಾದ ಹೇಳು ಎಂದು ನನ್ನ ಹೆಂಡತಿಗೆ ಹೇಳಿ ಬಾಗಲಕೋಟೆಯಿಂದ ಶಾದೀಪುರಕ್ಕೆ ಬಂದರು ಎಂದರೆ ಸರಿಯಲ್ಲ. ನನ್ನ ತಾಯಿ ಬಂದ ಮರುದಿನ ನಾನು ಬಾಗಲಕೋಟೆಯ ಮನೆಯ ರೂಮೀನಲ್ಲಿ ಹಾಕಿ ನನ್ನ ಹೆಂಡತಿಗೆ ಹೊಡೆದು ದೈಹಿಕವಾಗಿ ಚಿತ್ರಹಿಂಸೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಮಾಡಿದ್ದರಿಂದ ನನ್ನ ತಾಯಿ ಶಾದೀಪುರದಿಂದ ಬಾಗಲಕೋಟೆಗೆ ಬಂದರು ಎಂದರೆ ಸಾಕ್ಷಿ ಅವರು ಬಂದಿಲ್ಲ ಎಂದು ಹೇಳುತ್ತಾರೆ. ನಾನು ಬಾಗಲಕೋಟೆಯಲ್ಲಿ ಇದ್ದಾಗ ಹಣ ಬೇಕು ಎಂದು ನನ್ನ ತಾಯಿ ಹಾಗೂ ಹೆಂಡತಿಯನ್ನು ಪೀಡಿಸಿದ್ದರಿಂದ ನನ್ನ ತಾಯಿ ನಾನು ಮತ್ತು ನನ್ನ ಹೆಂಡತಿ ಬಾಗಲಕೋಟೆಯಿಂದ ಶಾದೀಪುರಕ್ಕೆ ಬಂದೆವು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನನ್ನ ಹೆಂಡತಿ ಹಣ ಇಲ್ಲ ಎಂದು ಹೇಳಿದ್ದರಿಂದ ನಾನು ನನ್ನ ಹೆಂಡತಿಯ ಮಂಗಲಸೂತ್ರವನ್ನು ಮುತ್ತುಟ ಫೈನಾನ್ಸನಲ್ಲಿ ಅಡ ಇಟ್ಟು ಹಣ ತೆಗೆದುಕೊಂಡೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮುತ್ತುಟ ಫೈನಾನ್ಸನ ರಸೀದಿ ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಡಿ-5 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಅದರಲ್ಲಿ ನನ್ನ ಹೆಸರು ಇದೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಗುರುತಿನ ಚೀಟಿ ಕೊಟ್ಟರೆ ಬಂಗಾರ ಅಡ ಇಟ್ಟುಕೊಂಡು

ಸಾಲ ಕೊಡುತ್ತಾರೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಮುತ್ತುಟ ಫೈನಾನ್ಸನಲ್ಲಿ ದಿಃ 14-08-2013 ರಂದು ರೂ.30,000/-ಲೋನ ಆಗಿರುತ್ತದೆ ಎಂದರೆ ಸರಿ. ಬಗಲೆಕೊಟೆಯಿಂದ ಗುಲ್ಬರ್ಗಾಕೆ ಬಂದು ಲೋನ ತೆಗೆದುಕೊಳ್ಳುವ ಏನು ಪ್ರಮೇಯ ಬಂದಿರುತ್ತದೆ ಎಂದರೆ ಸಾಕ್ಷಿ ನಾನು ಬಂದಿರಲಿಲ್ಲ ಎಂದು ಹೇಳುತ್ತಾರೆ. ಮುತ್ತುಟ ಫೈನಾನ್ಸನಲ್ಲಿ ಲೋನ ಕೊಡುವ ದಿನದಂದು ಅದೇ ದಿನ ವ್ಯಕ್ತಿಯ ಫೋಟೊ ತೆಗೆದುಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮುತ್ತುಟ ಫೈನಾನ್ಸನಲ್ಲಿ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ಹೆಂಡತಿಯ ಮಂಗಲಸೂತ್ರವನ್ನು ಮುತ್ತುಟ ಫೈನಾನ್ಸನಲ್ಲಿ ಅಡ ಇಟ್ಟು ಹಣ ತೆಗೆದುಕೊಂಡಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನನ್ನು ಹಾಗೂ ಶಿವರಾಜರವರನ್ನು ಗುಲ್ಬರ್ಗಾದ ಎಸ.ಪಿ ಕಛೇರಿಯಲ್ಲಿ ಕರೆದಿದ್ದರು ಎಂದರೆ ಸಾಕ್ಷಿ ನನ್ನನ್ನು ಮಾತ್ರ ಕರೆದಿದ್ದರು ಎಂದು ಹೇಳುತ್ತಾರೆ ಅವರು ಕರೆದ ದಿನಾಂಕ ನನಗೆ ನೆನಪಿಲ್ಲ. ಗುಲ್ಬರ್ಗಾದ ಎಸ.ಪಿ ಕಛೇರಿಯಲ್ಲಿ ನನ್ನನ್ನು ಯಾಕೆ ಕರೆದಿದ್ದರು ಮತ್ತು ಏನು ವಿಚಾರಿಸಿದ್ದರು ಎಂದರೆ ಸಾಕ್ಷಿ ನಾನು ಹೋದಾಗ ಅವರಿಗೆ ಏನೋ ಕೆಲಸ ಇತ್ತು ಆವಾಗ ಅವರು ನನಗೆ ಸಿಗಲಿಲ್ಲ ಎಂದು ಹೇಳುತ್ತಾರೆ. ಆವಾಗ ಎಸ.ಪಿ ಶಶಿಕುಮಾರ ಇದ್ದರು ಎಂದರೆ ಸರಿ. ಎಸ.ಪಿ ಶಶಿಕುಮಾರವರು 2018 ರಲ್ಲಿ ಎಲ್ಲಾ ಹೆಣ್ಣುಮಕ್ಕಳ ಸಹವಾಸ ಬಿಟ್ಟು ಹೆಂಡತಿ ಯೊಂದಿಗೆ ಇರಿ ಎಂದು ನನಗೆ ಹೇಳಿ ಕಳುಹಿಸಿದ್ದರು ಎಂದರೆ ಸಾಕ್ಷಿ ಅವರು ನನಗೆ ಸಿಕ್ಕಿರಲಿಲ್ಲ ಎಂದು ಹೇಳುತ್ತಾರೆ. ಎಸ.ಪಿ ಶಶಿಕುಮಾರವರು 2018 ರಲ್ಲಿ ಎಲ್ಲಾ ಹೆಣ್ಣುಮಕ್ಕಳ ಸಹವಾಸ ಬಿಟ್ಟು ಹೆಂಡತಿ ಯೊಂದಿಗೆ ಇರಿ ಎಂದು ನನಗೆ ಹೇಳಿದ್ದರು ಸಹ ಅವರು ನನಗೆ ಸಿಕ್ಕಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ದೊಡ್ಡಮ್ಮರವರು ಗುಲ್ಬರ್ಗಾದಲ್ಲಿ ಇದ್ದು ಅವರು ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ದೊಡ್ಡಮ್ಮರವರ ಅಂತ್ಯ ಕ್ರಿಯೆಗೆ ಸಾಸರಗಾವನಿಂದ ಶಾದೀಪುರಕ್ಕೆ ನನ್ನ ಹೆಂಡತಿ ಬಂದಿದ್ದರು ಎಂದರೆ ಸರಿ. ಅಂತ್ಯಕ್ರಿಯೆಗೆ ಬಂದಿದ್ದರು ಸಹ ನಾನು ನನ್ನ ಮನಬಂದಂತೆ ನನ್ನ ಹೆಂಡತಿಯನ್ನು ಹೊಡೆದಿರುತ್ತೇನೆ ಎಂದರೆ ಸರಿಯಲ್ಲ. ಆಗ ನನ್ನ ತಾಯಿ ಮತ್ತು ನನ್ನ ತಮ್ಮ ನನ್ನ ಹೆಂಡತಿಯನ್ನು ಬಿಡಿಸಿಕೊಂಡು ಇನ್ನು ಮುಂದೆ ಯಾವುದೇ ಕಾರ್ಯಕ್ಕಾಗಿ ಶಾದೀಪುರಕ್ಕೆ ಬರಬೇಡ ಎಂದು ಹೇಳಿದ್ದರಿಂದ ನನ್ನ ಹೆಂಡತಿ ಇಲ್ಲಿಯವರೆಗೆ ಶಾದೀಪುರಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಜೀವದ ಬೆದರಿಕೆ ಇದ್ದುದ್ದರಿಂದ ನನ್ನ ಹೆಂಡತಿ ಇಲ್ಲಿಯವರೆಗೆ ಶಾದೀಪುರಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. 2014 ರಲ್ಲಿ ನಾನು ಕೆಲವು ದಿನಗಳವರೆಗೆ ನನ್ನ ಮಗಳನ್ನು ನನ್ನ ಜೊತೆ ಕರೆದುಕೊಂಡು ಹೋಗಿದ್ದೆ ಎಂದರೆ ಸರಿ. ನಾನು ನನ್ನ ಮಗಳನ್ನು ನನ್ನ ಸ್ನೇಹಿತರ ಜೊತೆ ಇಸಪೇಟ ಆಡುವಾಗ ಅವಳನ್ನು ನನ್ನ ಜೊತೆ ಕೂಡಿಸಿಕೊಂಡಿದ್ದೆ ಅದನ್ನು ನೋಡಿ ನನ್ನ ತಮ್ಮ ಬಂದು ನನ್ನ ಮಗಳನ್ನು ಕರೆದುಕೊಂಡು ಸಾಸರಗಾವಗೆ ಅವನೆ ಬಿಟ್ಟು ಬಂದಿರುತ್ತಾನೆ ಎಂದರೆ ಸರಿಯಲ್ಲ. ನಾನು ಈಗ ಸದ್ಯ ಬೆಂಗಳೂರಿನಲ್ಲಿ ಇದ್ದೇನೆ ಎಂದರೆ ಸರಿ. ಇಲ್ಲಿ ನಡೆಯುತ್ತಿರುವ ಕೇಸು ಮತ್ತು ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕೇಸುಗಳ ಬಗ್ಗೆ ಗೊತ್ತಿದೆ ಎಂದರೆ ಸಾಕ್ಷಿ ಈ ಕೇಸಿನ ಬಗ್ಗೆ ಹಾಗು ಅಲ್ಲಿ ನಡೆಯುತ್ತಿರುವ ಒಂದು ಕೇಸಿನ ಬಗ್ಗೆ ಗೊತ್ತಿದೆ ಎಂದು ಹೇಳುತ್ತಾರೆ. ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಡೆಯುತ್ತಿರುವುದು ಯಾವ ಕೇಸು ಎಂದರೆ ಸಾಕ್ಷಿ ಕೇಸು ಗೊತ್ತಿಲ್ಲ ಆದರೆ ರೂ.3,000/-ಕೊಡುತ್ತಿದ್ದೇನೆ ಎಂದು ಹೇಳುತ್ತಾರೆ. ಅದು ಇ.ಪಿ 20/2022 ಕೇಸಿನಲ್ಲಿ ರೂ.3,000/-ಕಟ್ಟಿರುತ್ತೇನೆ ಅಂದರೆ ಸಾಕ್ಷಿ ಕೇಸ ನಂಬರ ಗೊತ್ತಿಲ್ಲ

ಆದರೆ ರೂ.3,000/-ಕೊಡುತ್ತಿದ್ದೇನೆ ಎಂದು ಹೇಳುತ್ತಾರೆ.ಇ.ಪಿ 20/2023 ಹಾಕುವ ಮೊದಲು ಲೋಕ ಅದಾಲತ್ ನಲ್ಲಿ ಅಸಲು ದಾವೆ ಸಂಖ್ಯೆ 8/2020 ರಲ್ಲಿ ನನ್ನ ಹಾಗೂ ನನ್ನ ಹೆಂಡತಿಯನ್ನು ಒಟ್ಟು ಗೂಡಿಸುವ ಪ್ರಯತ್ನ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಕರೆದುಕೊಂಡು ಹೋಗುತ್ತೇನೆ ಎಂದರು ಸಹ ಅವರು ಬರಲಿಲ್ಲ ಎಂದು ಹೇಳುತ್ತಾರೆ. ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ 8/2020,ಅಸಲು ದಾವೆ ಸಂಖ್ಯೆ 26/2017,ಇ.ಪಿ20/2023 ರಲ್ಲಿ ನೋಟಿಸ್ಸುಗಳು ಜಾರಿ ಆಗಿದ್ದರು ಸಹ ನಾನು ಉದ್ದೇಶ ಪೂರ್ವಕವಾಗಿ ನಾನು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸಾಕ್ಷಿ ನನಗೆ ಯಾವುದೇ ನೋಟಿಸ್ಸು ಬಂದಿಲ್ಲ ಎಂದು ಹೇಳುತ್ತಾರೆ. ಅಸಲು ದಾವೆ ಸಂಖ್ಯೆ 26/2017 ರ ದಾವೆ ವಜಾ ಆದ ನಂತರ ಮೇಲ್ಮನವಿ ಸಲ್ಲಿಸಿದ್ದು ನಾನು ಮೇಲ್ಮನವಿಯಲ್ಲಿಹಾಗೂ ಅಸಲು ದಾವೆ ಸಂಖ್ಯೆ 26/2017 ರಿಮ್ಯಾಂಡ ಆದ ನಂತರ ನನಗೆ ಎಲ್ಲದಾವೆಗಳ ನೋಟಿಸ್ಸುಗಳು ಜಾರಿ ಆಗಿದ್ದರು ಸಹ ನಾನು ಉದ್ದೇಶ ಪೂರ್ವಕವಾಗಿ ನಾನು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸಾಕ್ಷಿ ನನಗೆ ನೋಟಿಸ್ಸು ಬಂದ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ರೂ.3,000/-ಕೊಟ್ಟಿರುವ ದಾವೆಯನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ದಾವೆಯ ಬಗ್ಗೆ ಮಾಹಿತಿ ಇಲ್ಲ. ನನಗೆ ಯಾವುದೇ ದಾವೆಗಳ ಮಾಹಿತಿ ಇಲ್ಲದೆ ಇದ್ದರು ಸಹ ನಾನು ಅಸಲು ದಾವೆ ಸಂಖ್ಯೆ 8/2020 ರಲ್ಲಿ ನಾನು ಯಾವ ಆಧಾರದ ಮೇಲೆ ಶ್ರೀ ಸಿ.ಎಸ ವಕೀಲರನ್ನು ಕೇಸ ನಡೆಸಲು ಹೇಳಿರುತ್ತೇನೆ ಎಂದರೆ ಸಾಕ್ಷಿ ಯಾರ ಜೊತೆ ಕೇಸು ಆಗಿದೆ ಏನು ಕೇಸು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಯಾವುದೇ ಮಾಹಿತಿ ಕೊಡದೆ ಇದ್ದರು ಸಹ ನನ್ನ ವಕೀಲರು ವಕಾಲತ ನಾಮ ಸಲ್ಲಿಸಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿ ಯಾವ

ಕೇಸ ಎಂದು ನನಗೆ ಗೊತ್ತಿಲ್ಲ. ವಕೀಲರು ಸಹಿ ಮಾಡು ಅಂತಾ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆ ದಾವೆಯು ಕೂಡ ಕನ್ನಡ ಭಾಷೆಯಲ್ಲಿ ಬರೆಯಲಾಗಿತ್ತು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಾವೆಯ ಬಗ್ಗೆ ನನಗೆ ಗೊತ್ತಿದ್ದರು ಸಹ ಮತ್ತು ಆ ದಾವೆಯು ನನ್ನ ಮಾತ್ರ ಭಾಷೆ ಕನ್ನಡದಲ್ಲಿ ಬರೆದಿರುವುದು ಗೊತ್ತಿದ್ದರು ಸಹ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಈ ಅರ್ಜಿ ಸಲ್ಲಿಸುವ ಮೊದಲು ನನ್ನ ಹೆಂಡತಿಯನ್ನು ನನ್ನ ಜೊತೆ ಬಂದು ಇರು ಎಂದು ಅವಳಿಗೆ ಕಾನೂನು ಬದ್ಧ ನೋಟಿಸ್ಸು ನೀಡಿರುತ್ತೇನಾ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹೆಂಡತಿ ನನ್ನ ಜೊತೆ ಬಂರುವುದಿಲ್ಲ ಎಂದು ಹೇಳಿದ್ದರು ಅವಳು ನನ್ನ ಜೊತೆ ಬಂದು ಇರಬೇಕು ಮತ್ತು ಅವಳು ನನಗೆ ಬೇಕು ಎಂದು ನಾನು ನ್ಯಾಯಾಲಯಕ್ಕೆ ಯಾವುದೇ ದಾವೆ ಸಲ್ಲಿಸಿಲ್ಲ. ನಾನು ಶ್ರೇಯಾ ಮತ್ತು ಡಿಸೋಜಾ ಮತ್ತು ಆಭಾ ಪರಾಟೆರವರ ಜೊತೆ ಇರಬೇಕು ಆದ್ದರಿಂದ ನನ್ನ ಹೆಂಡತಿಗೆ ವಿಚ್ಛೇದನೆ ಕೊಡಬೇಕು ಎಂದು ಅವಳ ವಿರುದ್ಧ ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಉಡಪಿ, ಬಾಗಲಕೋಟ ಮತ್ತು ಬೆಂಗೂರಿನಲ್ಲಿ ಕೆಲಸ ಮಾಡುವಾಗ ಆಭಾ ಪರಾಟೆ ನನ್ನ ಜೊತೆ ಇದ್ದುಕೊಂಡು ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಆಭಾ ಪರಾಟೆ ಈಗ ಬೆಂಗಳೂರಿನಲ್ಲಿ ಇರುತ್ತಾರೆ ಎಂದರೆ ಸರಿ.

5. ನಾನು 2018 ರಲ್ಲಿ ನಾನು ಮಡಿಕೇರಿಯಲ್ಲಿ ಇದ್ದೆ. 2018 ಮೇ ತಿಂಗಳಿನಲ್ಲಿ ನಾನು ಎಲ್ಲಿ ಇದ್ದೆ ಎಂದರೆ ಸಾಕ್ಷಿ ನಾನು ಮಡಿಕೇರಿಯಲ್ಲಿ ಇದ್ದೆ ಎಂದು ಹೇಳುತ್ತಾರೆ. ನಾನು

ಮಡಿಕೇರಿಯಲ್ಲಿ 2017 ರಿಂದ ಆಗಸ್ಟ 2018 ರವರೆ ಇದ್ದೆ. ದಿಃ 10-05-2018 ರಂದು ನಾನು ಎಲ್ಲಿ ಇದ್ದೆ ಎಂದು ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ತಪ್ಪು ಇಲ್ಲದೆ ಇದ್ದರು ಸಹ ನಾನೇ ಎಲ್ಲಾ ನನ್ನ ದುಷಚಟಗಳಿಗಾಗಿ ಅವಳನ್ನು ಹೊಡೆದು ಮನೆಯಿಂದ ಹೊರ ಹಾಕಿ ಈಗ ವಿಚ್ಛೇದನೆ ಕೋರಿ ಅರ್ಜಿ ಸಲ್ಲಿಸಿ ಬೆಂಗಳೂರಿನಲ್ಲಿ ಬೇರೆ ಹೆಣ್ಣು ಮಕ್ಕಳ ಜೊತೆ ಒಡ್ಯಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಇದ್ದೇನೆ ಎಂದು ನನ್ನ ಊರಿನಲ್ಲಿ ಎಲ್ಲರಿಗೂ ಗೊತ್ತಿದ್ದರಿಂದ ನನ್ನ ಪರವಾಗಿ ಯಾರು ನನಗೆ ಸಾಕ್ಷಿ ಕೊಡಲು ಬರುತ್ತಿಲ್ಲ ಆದ್ದರಿಂದ ನಾನು ಇಲ್ಲಿಯವರೆಗೆ ಸಾಕ್ಷಗಳ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಅದರ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ನನ್ನ ಮದುವೆಕಿಂತ ಮೊದಲು ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ನನ್ನ ಮದುವೆಕಿಂತ ಮೊದಲೇ ತೀರಿಕೊಂಡಿದ್ದರಿಂದ ಎದುರುದಾರರು ನನ್ನ ತಂದೆ-ತಾಯಿಗೆ ಮಾನಸೀಕ ಅಥವಾ ದೈಹಿಕವಾಗಿ ತೋಂದರೆ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಗೆ ಕಿರುಕುಳ ಕೊಡುತ್ತಿದ್ದರು ಎಂದು ಹೇಳುತ್ತಾರೆ. ನಾನು ನನ್ನ ಅರ್ಜಿಯಲ್ಲಿ ಪೇರೆಂಟ್ಸ ಎಂದು ಬರೆದಿದ್ದೇನೆ ಎಂದರೆ ಸಾಕ್ಷಿ ಪೇರೆಂಟ್ಸ ಎಂದರೆ ತಾಯಿ ಎಂದು ಹೇಳುತ್ತಾರೆ. ಪೇರೆಂಟ್ಸ ಎಂದರೆ ತಂದೆ-ತಾಯಿ ಇಬ್ಬರು ಬರುತ್ತಾರೆ ಎಂದರೆ ಸಾಕ್ಷಿ ಪೇರೆಂಟ್ಸ ಎಂದರೆ ತಾಯಿ ಎಂದು ಹೇಳುತ್ತಾರೆ. ನಾವು ಬಾಗಲಕೋಟೆಯಿಂದ ಬಂದ ನಂತರ ನಾವು ಎದುರುದಾರರಿಗೆ ತೋಂದರೆ ಕೊಡುತ್ತಿದ್ದರಿಂದ ನನ್ನ ತಾಯಿ ಖುದ್ದಾಗಿ ನನ್ನ ಹೆಂಡತಿಯನ್ನು ಸಾಸರಗಾವಗೆ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾಯಿ ಕಳುಹಿಸಿಲ್ಲ ಅವಳೆ ಹೋಗಿರುತ್ತಾಳೆ ಎಂದು ಹೇಳುತ್ತಾರೆ. ನಾನು ಕುಡಿದ ಅಮಲಿನಲ್ಲಿ ನನ್ನ ಹೆಂಡತಿಯನ್ನು ಹೊಡೆದಿದ್ದರಿಂದ ನನ್ನ ತಾಯಿ ನನ್ನ ಹೆಂಡತಿಯನ್ನು

ಬೇರೆಯವರ ಮನೆಯಲ್ಲಿ ಇಟ್ಟು ಮರುದಿನ ಮಧಾಹ್ನ ನನ್ನ ತಾಯಿ ಖುದ್ದಾಗಿ ನನ್ನ ಹೆಂಡತಿಯನ್ನು ಸಾಸರಗಾವಗೆ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಬದುಕಿದ್ದೆರ ಎಂದರೆ ಸರಿ. ನಾನು ನನ್ನ ಹೆಂಡತಿಯ ಯಾವುದೇ ತಪ್ಪು ಇಲ್ಲದೆ ಇದ್ದರು ಸಹ ಹೊಡೆದಿದ್ದರಿಂದ ಅವಳು ಸಾಸರಗಾವಕೆ ಹೋಗಿ ತಮ್ಮ ಮಕ್ಕಳ ವಿದ್ಯಾಭ್ಯಾಸ ಕೂಡ ಸಾಸರಗಾವದಲ್ಲಿ ಮಾಡಿಸುತ್ತಿದ್ದಾರೆ ಎಂದರೆ ಸಾಕ್ಷಿ ನನ್ನಹೆಂಡತಿಯೆ ಸಾಸರಗಾವಕ್ಕೆ ಹೋಗಿರುತ್ತಾಳೆ ಅದು ಅವರ ತಮ್ಮನಿಗೆ ಗೊತ್ತು ಮತ್ತು ಅವಳ ತಮ್ಮ ಈಗ ನ್ಯಾಯಾಲಯದಲ್ಲಿ ವಕೀಲರಾಗಿ ನಿಂತಿರುತ್ತಾರೆ ಎಂದು ಹೇಳುತ್ತಾರೆ. ಕಿರಿಯಶ್ರೇಣಿ ನ್ಯಾಯಾಲಯದಲ್ಲಿ ನನ್ನ ಪರವಾಗಿ ಹಾಜರಾಗಿದ್ದ ವಕೀಲರು ಈಗ ನ್ಯಾಯಾಲಯದಲ್ಲಿ ಇದ್ದಾರೆ ಎಂದರೆ ಸರಿ. ಸತ್ಯಾಂಶ ಹೊರಬರುತ್ತದೆ ಎಂದು ನಾನು ಸಾಸರಗಾವಕ್ಕೆ ಹೋದ ದಿನಾಂಕ ಮತ್ತು ಪಂಚಾಯಿತಿಯಲ್ಲಿ ಯಾವ ವ್ಯಕ್ತಿಗಳು ಇದ್ದರು ಎಂದು ಬರೆದಿಲ್ಲ ಎಂದರೆ ಸಾಕ್ಷಿ ದಿನಾಂಕ ನನಗೆ ನೆನಪಿಲ್ಲ ವ್ಯಕ್ತಿಗಳ ಹೆಸರು ನೆನಪಿದೆ ಎಂದು ಹೇಳುತ್ತಾರೆ. ಸಮಯಬಂದಾಗ ವ್ಯಕ್ತಿಗಳ ಹೆಸರು ಹೇಳೋಣ ಎಂದು ನಾನು ನನ್ನ ಅರ್ಜಿಯಲ್ಲಿ ಸಾಕ್ಷಿದಾರರ ಹೆಸರು ಬರೆದಿಲ್ಲ ಎಂದರೆ ಸಾಕ್ಷಿ ವ್ಯಕ್ತಿಗಳ ಹೆಸರು ನೆನಪಿದೆ ಆದರೆ ಅವರ ಹೆಸರು ಬರೆಸಿಲ್ಲ ಎಂದು ಹೇಳುತ್ತಾರೆ. ನನಗೆ ವ್ಯಕ್ತಿಗಳ ಹೆಸರು ಗೊತ್ತಿದ್ದರು ಸಹ ನಾನು ನನ್ನ ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಎದುರುದಾರರಿಗೆ ಮಾನಸೀಕ ಹಾಗೂ ದೈಹಿಕವಾಗಿ ಕಿರುಕುಳ ಕೊಡುತ್ತಾ ಬಂದಿದ್ದು ಈಗ ಅವರಿಗೆ ಮಾನಸೀಕ ಕಿರುಕುಳ ಕೊಡುವ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಸುಳ್ಳು ಅರ್ಜಿ ಸಲ್ಲಿಸಿಲ್ಲ ಎಂದು ಹೇಳುತ್ತಾರೆ. ಎದುರುದಾರರು 2014 ರಿಂದ ತನ್ನ ತವರುಮನೆಯಲ್ಲಿ ಇದ್ದುದ್ದರಿಂದ ಅವರು ಯಾರಿಗೂ ಹಿಂಸೆ ಕೊಡುವ ಅಥವಾ ಕಿರುಕುಳ

ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ಹೆಂಡತಿ ನನ್ನ ತಾಯಿ, ನನ್ನ ಅಕ್ಕ, ತಂಗಿ ಮತ್ತು ಸ್ನೇಹಿತರಿಗೆ ಮತ್ತು ಸ್ನೇಹಿತರ ತಾಯಿಗೂ ಫೋನ ಮಾಡಿ ನನಗೆ ಕಿರುಕುಳ ಕೊಟ್ಟಿರುತ್ತಾಳೆ ಎಂದು ಹೇಳುತ್ತಾರೆ. ನನ್ನ ಹೆಂಡತಿ ನನ್ನ ಹೆಂಡತಿ ನನ್ನ ತಾಯಿ, ನನ್ನ ಅಕ್ಕ, ತಂಗಿ ಮತ್ತು ಸ್ನೇಹಿತರಿಗೆ ಮತ್ತು ಸ್ನೇಹಿತರ ತಾಯಿಗೂ ಫೋನ ಮಾಡಿ ನನಗೆ ಕಿರುಕುಳ ಕೊಟ್ಟಿರುತ್ತಾಳೆ ಎಂದು ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಕುಡಿಯುವುದನ್ನು ಬಿಟ್ಟರೆ ನನ್ನ ಹೆಂಡತಿ ನನ್ನ ಜೊತೆ ಈಗಲೂ ಬಂದು ಇರಲು ತಯ್ಯಾರು ಇದ್ದರು ಸಹ ನಾನು ನನ್ನನ್ನು ತಿದ್ದು ಕೊಳ್ಳದೆ ಮೊದಲಿನಂತೆ ಮಾಡುತ್ತಿದ್ದರಿಂದ ಅವಳು ಇಲ್ಲಿಯವರೆಗೂ ತನ್ನ ತವರುಮನೆಯಲ್ಲಿ ಇದ್ದಾಳೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆ.ಎಮ್. ಎಫ್. ಸಿ,**
**ಚಿಂಚೋಳಿ.**